ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಅಯುಕ್ತರವರ ಕಛೇರಿ (ಆಡಳಿತ) ರವರ ಕಛೇರಿ ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2, 2ನೇ ಮಹಡಿ, ನಂ.642 ಪಯೋನೀರ್ ಪ್ಲಾಜಾ ಕೆಂಚೇನಹಳ್ಳಿ ಮುಖ್ಯ ರಸ್ತೆ, ರಾಜರಾಜೇಶ್ವರಿ ನಗರ ಬೆಂಗಳೂರು–560098, ದೂರವಾಣಿ 080–26994402 jcctdvo@gmail.com

ಕಾ.ನಿ.868/2022-23

ಸಂಖ್ಯೆ:ವಾತೆಜಂಆ(ಆ)/ವಿ.ಸ&ಸೇ.ತೆ.ಕ–2/ವಾಹನ/ಸಿಆರ್–01/2021–22 ದಿನಾಂಕ: 05–08–2022

Office of the Additional Commissioner of Commercial Taxes
08 AUG 2022
1000
ADCOM
Bengaluru (e-Governance)

Ac. e-gov 3

## ಟೆಂಡರ್ ಪ್ರಕಟಣೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ)–ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2, ಬೆಂಗಳೂರು, ವಿಭಾಗದ ಅಧೀನ ಕಛೇರಿಗಳ ಉಪಯೋಗಕ್ಕಾಗಿ ಒಟ್ಟು 13 ವಾಹನಗಳನ್ನು ಮಾಸಿಕ ಬಾಡಿಗೆ ಅಧಾರದ ಮೇಲೆ ಪಡೆದುಕೊಳ್ಳಲು ದ್ವಿ–ಲಕೋಟೆ ಪದ್ಧತಿಯಂತೆ, ಇಲಾಖೆಯ ನಿಬಂಧನೆ ಹಾಗೂ ಷರತ್ತೀಗೆ ಒಳಪಟ್ಟು ಟ್ರಾವಲ್ ಏಜನ್ಸಿದಾರರು/ಸಂಸ್ಥೆ/ಮಾಲೀಕರೆ ವಾಹನ ಚಾಲಕರಾಗಿರುವವರಿಂದ ಟೆಂಡರ್ ಕರೆಯಲಾಗಿರುತ್ತದೆ.

**ಅರ್ಜಿ ಸಲ್ಲಸಲು ಕೊನೆಯ ದಿನಾಂಕ: 18/08/2022ರ ಸಮಯ ಸಂಜೆ 4.30 ಗಂಟೆ**

ಟೆಂಡರ್ ವಿವರಗಳನ್ನು ವಾಣಿಜ್ಯ ತೆರಿಗೆ ಇಲಾಕೆಯ ವೆಬ್‌ಸೈಟ್ http://ctax.kar.nic.in ಮೂಲಕ ಪಡೆಯಬಹುದಾಗಿದ್ದು ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಹೆಚ್ಚಿನ ವಿವರಗಳನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಲ್ಲಿ ಕರ್ತವ್ಯದ ವೇಳೆಯಲ್ಲಿ ಅಥಾವಾ ಮೇಲ್ಕಾಣಿಸಿದ ವೆಬ್‌ಸೈಟ್‌ನಿಂದಲೂ ಸಹ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

ಸಹಿ/–

(ರಾಮನ್.ಕೆ)
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಆಡಳಿತ)–ವಿ.ಸ.&ಸೆ.ತೆ.ಕ–2, ಬೆಂಗಳೂರು

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಆಡಳಿತ) ವಿ.ಸ.& ಸೇ.ತೆ.ಕ-2. ಬೆಂಗಳೂರು

ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

ಟ.ಸಂ. 868|2022-23

ಸಂಖ್ಯೆ:ವಾತೆಜಂಅ(ಆ)/ವಿ..ಸ&ಸೇ.ತೆ.ಕ–2/
ವಾಹನ/ಸಿಆರ್–04/2022–23

ವಾಣಿಜ್ಯ ತೆರಿಗೆ ಜಂಟಿ ಅಯುಕ್ತರು (ಆಡಳಿತ) ರವರ ಕಛೇರಿ
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2 ನಂ,642
ಪಯೋನಿರ್ ಪ್ಲಾಜ, ರಾಜರಾಜೇಶ್ವರಿ ನಗರ, ಬೆಂಗಳೂರು
ದಿನಾಂಕ:05–08–2022 ದೂರವಾಣಿ ಸಂಖ್ಯೆ:080–26994402

## ಟೆಂಡರ್ ಪ್ರಕಟಣೆ

ವಿಷಯ:– ಟೆಂಡರ್ ಪ್ರಕ್ರಿಯೆ ಮುಖಾಂತರ ಅಧಿಕೃತ ಟ್ರಾವಲ್ ಏಜೆನ್ಸಿದಾರರು/ಸಂಸ್ಥೆ/ಮಾಲೀಕರೇ ಚಾಲಕರು, ಇವರಿಂದ 13 ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಅಧಾರದ ಮೇಲೆ ಪಡೆಯುವ ಕುರಿತು.

ಉಲ್ಲೇಖ:–01. ಘನ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/96/ಶಿವಾನಿ/2012, ದಿನಾಂಕ:23.08.2012

02. ಸರ್ಕಾರದ ಅಧೀನ ಕಾರ್ಯದರ್ಶಿ ಅರ್ಥಿಕ ಇಲಾಖೆ ರವರ ಪತ್ರ ಸಂಖ್ಯೆ:ಅಇ–59/ವಾತೆಇ–2016/ದಿನಾಂಕ:30.03.2016
03. ಸರ್ಕಾರದ ಅಧೀನ ಕಾರ್ಯದರ್ಶಿ ಅರ್ಥಿಕ ಇಲಾಖೆ ರವರ ಪತ್ರ ಸಂಖ್ಯೆ:ಅಇ–59/ವಾತೆಇ–2017/ದಿನಾಂಕ:08.05.2017
04. ಮಾನ್ಯ ವಾಣಿಜ್ಯ ತೆರಿಗೆಗಳ ಅಯುಕ್ತರ ಆದೇಶ ಸಂಖ್ಯೆ:ವಿಹೆಚ್‌ಟಿ/ಸಿಆರ್–07/2018–19. ದಿನಾಂಕ:19.07.2021.
05. ಮಾನ್ಯ ವಾಣಿಜ್ಯ ತೆರಿಗೆಗಳ ಅಯುಕ್ತರ ಆದೇಶ ಸಂಖ್ಯೆ:ವಿಹೆಚ್‌ಟಿ/ಸಿಆರ್–15/2022–23. ದಿನಾಂಕ:01.08.2022.

**********

ವಾಣಿಜ್ಯ ತೆರಿಗೆ ಜಂಟಿ ಅಯುಕ್ತರು (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2 ಬೆಂಗಳೂರು–98 ಇವರು ವಿಭಾಗದ ಅಧೀನ ಕಛೇರಿಗಳ ಉಪಯೋಗಕ್ಕಾಗಿ 13 (ಹದಿಮೂರು) ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಅಧಾರದ ಮೇಲೆ ಪಡೆಯಲು ಉಲ್ಲೇಖ(05)ರ ಮಾನ್ಯ ಅಯುಕ್ತರವರ ಪತ್ರದಲ್ಲಿ ಅನುಮತಿ ನೀಡಲಾಗಿರುತ್ತದೆ.

ಅಧಿಕೃತ ಟ್ರಾವಲ್ ಏಜೆನ್ಸಿದಾರರು/ಸಂಸ್ಥೆ/ಮಾಲೀಕರೇ ಚಾಲಕರಾಗಿರುವವರಿಂದ ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಅಹ್ವಾನಿಸಲಾಗಿದ್ದು ಆಸಕ್ತಿಯುಳ್ಳವರು ಅರ್ಜಿಯನ್ನು ಕಛೇರಿಗೆ ಈ ಕೆಳಕಂಡ ವಿವರಗಳೊಂದಿಗೆ ಸಲ್ಲಿಸಬಹುದಾಗಿರುತ್ತದೆ.

1. ಅರ್ಜಿ ಸಲ್ಲಿಸುವ ವಿಧ : ದ್ವಿ–ಲಕೋಟೆ ಪದ್ಧತಿ.
2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 18–08–2022 ಸಂಜೆ 4.00 ಗಂಟೆಗೆ
3. ಲಕೋಟೆ ತರೆಯುವ ದಿನಾಂಕ : 19–08–2022 ಬೆಳಿಗ್ಗೆ 11.30 ಗಂಟೆಗೆ
4. ವಾಹನದ ಮಾದರಿ : 2017 ಮತ್ತು ನಂತರದ ವಾಹನಗಳು
5. ಮಾಸಿಕೆ ಬಾಡಿಗೆ ಗರಿಷ್ಠ ಮೊತ್ತ : ಮಾಸಿಕೆ ಬಾಡಿಗೆ ಗರಿಷ್ಠ ಮೊತ್ತ ರೂ.35,000/–
6. ವಾಹನದ ಗುತ್ತಿಗೆ ಸೇವಾ ಅವಧಿ : ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಈ ವಿಭಾಗಕ್ಕೆ ಒದಗಿಸುವ ಕಾಲಮಿತಿಯು ದಿನಾಂಕ:01–09–2022 ರಿಂದ 31–03–2023 ರವರೆಗೆ ಇರುತ್ತದೆ, ಅಗತ್ಯವಿದ್ದರೆ ಇದೇ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅಥವಾ ಇನ್ನೂ ಹೆಚ್ಚಿನ ಷರತ್ತುಗಳ ಜೊತೆಗೆ ಒಂದು ತ್ರೈಮಾಸಿಕದ ಅವಧಿಗೆ ವಾಹನ ಮಾಲೀಕರು ಮತ್ತು ಈ ಇಲಾಖೆಯ ಆಯುಕ್ತರ ಲಿಖಿತ ಇಚ್ಚೆಯ ಮೇರೆಗೆ ಮುಂದುವರೆಸಬಹುದಾಗಿರುತ್ತದೆ. ಇದಕ್ಕೂ ಮೊದಲು ಕರಾರು ರದ್ದುಗೊಳಿಸುವ ಹಕ್ಕು ಮಾನ್ಯ ಆಯುಕ್ತರು/ಜಂಟಿ ಆಯುಕ್ತರವರದ್ದಾಗಿರುತ್ತದೆ.

7. **ಅರ್ಜಿದಾರರು ಕಛೇರಿಗೆ ಸಲ್ಲಿಸಬೇಕಾದ ನಮೂನೆಯ ವಿವರಗಳು:**

| | | |
|---|---|---|
| 1. | **ಅರ್ಜಿದಾರರ ಹೆಸರು:** (ಅರ್ಜಿದಾರರ ಹೆಸರು ದಪ್ಪ ಅಕ್ಷರಗಳಲ್ಲಿ, ಅರ್ಜಿದಾರರ ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರಗಳು) | |
| 2. | **ವಿಳಾಸದ ದಾಖಲೆಗಳು:** (ಮತದಾರರ ಗುರಿತಿನ ಚೀಟಿ/ರೇಷನ್ ಕಾರ್ಡ್/ಆದಾರ್ ಕಾರ್ಡ್/ಪಾಸ್‌ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಚುನಾವಣಾ ಗುರುತಿನ ಚೀಟಿ ಹಾಗೂ ಖಾಯಂ ವಿಳಾಸ ದಾಖಲೆ) | |
| 3. | **ಬ್ಯಾಂಕ್ ಖಾತೆಯ ವಿವರಗಳು:** (ಉಳಿತಾಯ ಖಾತೆ ಹೊಂದಿರುವ ಬ್ಯಾಂಕಿನ ಹೆಸರು, ವಿಳಾಸ, ಉಳಿತಾಯ ಖಾತೆಯ ಸಂಖ್ಯೆ ಹಾಗೂ ಚೆಕ್ಕಿನ ಪ್ರತಿ) | |
| 4. | **ಇತರೆ ದಾಖಲಾತಿಗಳು:** (ಕಡ್ಡಾಯವಾಗಿ ಪಾನ್‌ಕಾರ್ಡ್ ಮತ್ತು ಆಧಾರ್ ಕಾರ್ಡ್‌ನ ಪ್ರತಿಗಳು ಹಾಗೂ ಮಾಲೀಕರಿಗೆ ಸಂಬಂಧಿಸಿದಂತೆ ಡ್ರೈವಿಂಗ್ ಲೈಸೆನ್ಸ್, ಚಾಲಕರ ದೈಹಿಕ ಸಾಮರ್ಥ್ಯ ಪ್ರಮಾಣ ಪತ್ರ) | |

8. **ಖಾಸಗಿ ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳು:**

| | | |
|---|---|---|
| 1. | ವಾಹನದ ನೋಂದಣಿ ಪುಸ್ತಕದ ಪ್ರತಿ | |
| 2. | ವಾಹನದ ವಿಮಾ ಪಾಲಿಸಿ ಪ್ರತಿ | |
| 3. | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನ ಪರವಾನಗಿ ಪ್ರತಿ | |
| 4. | ರಸ್ತೆ ತೆರಿಗೆಯನ್ನು ಸಂಬಂಧಿಸಿದ ಇಲಾಖೆಗೆ ಪಾವತಿಸಿರುವ ವಿವರದ ಪ್ರತಿ | |
| 5. | ವಾಯು ಮಾಲಿನ್ಯ ಇಲಾಖೆಯವರು ನೀಡುವ ಪ್ರಮಾಣ ಪತ್ರ | |

(ಕೆ ರಾಮನ್)
ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು, (ಆಡಳಿತ),
ವಿ.ಸ&ಸೇ.ತೆ.ಕ.–2, ಬೆಂಗಳೂರು.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಆಡಳಿತ) ವಿ.ಸ.& ಸೇ.ತೆ.ಕ-2, ಬೆಂಗಳೂರು

## ಷರತ್ತು ಮತ್ತು ನಿಬಂಧನೆಗಳು:

| | |
|---|---|
| 1 | ಅನಾರೋಗ್ಯವೂ ಸೇರಿದಂತೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಒಂದು ತಿಂಗಳಲ್ಲಿ ಎರಡು ದಿನ ಮಾತ್ರ ವಾಹನ ಉಪಯೋಗಿಸುವ ಕಛೇರಿಯ ಅಧಿಕಾರಿಯವರಿಂದ ಅನುಮತಿ ಪಡೆದು, ಮಾಲೀಕ-ಚಾಲಕರು ರಜೆ ಪಡೆಯಬಹುದು. ಆ ಅವಧಿಯಲ್ಲಿ ಬದಲಿ ವಾಹನದ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಲೇಬೇಕು. ಇಲ್ಲದಿದ್ದರೆ ಗೈರುಹಾಜರಿ ದಿವಸ ಎಂದು ಪರಿಗಣಿಸಿ ಬಾಡಿಗೆ ಕಡಿತಗೊಳಿಸಲಾಗುವುದು.<br>ಜೊತೆಗೆ ಸಾರ್ವತ್ರಿಕ ರಜೆ ದಿನಗಳಲ್ಲಿ ಅಗತ್ಯ ಬಿದ್ದಾಗ ತುರ್ತು ಕೆಲಸಗಳ ಸಂದರ್ಭಗಳಲ್ಲಿ ವಾಹನ ಚಾಲಕರು ಹೆಚ್ಚುವರಿ ಬಾಡಿಗೆಯನ್ನು ನಿರೀಕ್ಷಿಸದೆ ಕಛೇರಿ ಕರ್ತವ್ಯ ನಿರ್ವಹಿಸಲು ಸಿದ್ದರಿರಬೇಕು. |
| 2 | ಮಾಸಿಕ ಬಾಡಿಗೆ ಆಧಾರದ ಮೇಲೆ ಹಾಗೂ ಆದೇಶದಲ್ಲಿನ ದರಗಳಿಗೆ ಒಳಪಟ್ಟ ವಾಹನಗಳನ್ನು ಮಾತ್ರ ಬಾಡಿಗೆಗೆ ಪಡೆಯಲಾಗುತ್ತದೆ. |
| 3 | ಮಾಲೀಕ–ಚಾಲಕರು ಕಟ್ಟುನಿಟ್ಟಾಗಿ ಸಮಯಪಾಲನೆ ಮಾಡತಕ್ಕದ್ದು. ಕರ್ತವ್ಯದ ಸಮಯದಲ್ಲಿ ಕಡ್ಡಾಯವಾಗಿ ಸಮವಸ್ತ್ರವನ್ನು ಧರಿಸಬೇಕು. ವಾಹನ ಉಪಯೋಗಿಸುವ ಕಛೇರಿಯ ಮುಖ್ಯಸ್ಥರಿಂದ ಈ ಕುರಿತು ದೂರುಗಳು ಬಂದಲ್ಲಿ ಅಂತಹ ವಾಹನದ ಬಳಕೆಯನ್ನು ನಿಲ್ಲಿಸುವ, ಒಪ್ಪಂದವನ್ನು ರದ್ದುಪಡಿಸುವ ಅಧಿಕಾರ ವಾಣಿಜ್ಯ ತೆರಿಗೆ ಅಪರ ಆಯುಕ್ತರವರದ್ದಾಗಿರುತ್ತದೆ. |
| 4 | ಇಲಾಖೆಯ ಈ ವಿಭಾಗದ ಪ್ರತಿ ಕಛೇರಿಯಲ್ಲಿ ಉಪಯೋಗಿಸುವ ಪ್ರತಿ ವಾಹನಕ್ಕೆ ಸಂಬಂಧಿಸಿದಂತೆ ನಿಗಧಿತ ಲಾಗ್ ಪುಸ್ತಕವನ್ನು ನಿರ್ವಹಿಸಿ ಪ್ರತಿ ದಿನದ ಆರಂಭ ಮತ್ತು ಅಂತ್ಯದವರೆಗಿನ ವಾಹನ ಓಡಾಟದ ಸಂಬಂಧ ಈ ಪುಸ್ತಕದಲ್ಲಿ ಅಗತ್ಯ ದಾಖಲೆಗಳನ್ನು ನಮೂದಿಸಿ ವಾಹನವನ್ನು ಉಪಯೋಗಿಸಿದ ಅಧಿಕಾರಿಯವರಿಂದ ರುಜು ಪಡೆಯತಕ್ಕದ್ದು. |
| 5 | ಈ ವಿಭಾಗದ ಪ್ರತಿ ಕಛೇರಿಯಲ್ಲಿ ಉಪಯೋಗಿಸುವ ವಾಹನ ಓಡಾಟಕ್ಕೆ ಸಂಬಂಧಿಸಿದಂತೆ ಆಯಾ ದಿನದ ಆರಂಭಿಕ ಮತ್ತು ಅಂತಿಮ ಸಮಯದ ಗಣನೆ ಮತ್ತು ಕಿಲೋಮೀಟರ್‌ನ ಗಣನೆಯು ಆಯಾ ಕಛೇರಿಯ ಆವರಣದಿಂದ ಕಛೇರಿ ಕಾರ್ಯದ ನಿಮಿತ್ತ ಆ ವಾಹನ ಹೊರಡುವ ಕ್ಷಣದಿಂದ ಪ್ರಾರಂಭವಾಗುತ್ತದೆ. ಹಾಗೂ ಆ ದಿನದ ಕಾರ್ಯ ಮುಗಿದ ಮೇಲೆ ಅದೇ ಸ್ಥಳದಲ್ಲಿ ಕೊನೆಗೊಳ್ಳುತ್ತದೆ. |
| 6 | ಯಾವುದೇ ತಿಂಗಳಿನ ವಾಹನ ಬಾಡಿಗೆ ಹಣವನ್ನು ಅದರ ಮುಂದಿನ ತಿಂಗಳು ವಾಹನ ಮಾಲೀಕರು ಸಲ್ಲಿಸುವ ಬಿಲ್ಲಿನ ಆಧಾರದ ಮೇಲೆ ಪಾವತಿಸಲಾಗುವುದು. ಇಲಾಖೆಗೆ ಬಾಡಿಗೆ ಹಣದ ಬಿಲ್ಲನ್ನು ಸಂಬಂಧಿಸಿದ ವಾಹನದ ಲಾಗ್ ಪುಸ್ತಕದ ಕಛೇರಿ ಮುಖ್ಯಸ್ಥರಿಂದ ದೃಢೀಕೃತವಾದ ನಕಲು ಪ್ರತಿ ಮತ್ತು ವಾಹನ ಉಪಯೋಗಿಸಿದ ಕಛೇರಿಯ ಮುಖ್ಯಸ್ಥರ ಸೂಕ್ತ ಪ್ರಮಾಣಪತ್ರದ ಜೊತೆ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಸಲ್ಲಿಸತಕ್ಕದ್ದು. |
| 7 | ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಈ ಇಲಾಖೆಗೆ ಒದಗಿಸುವ ಕಾಲಮಿತಿಯು ಆರಂಭದಲ್ಲಿ ದಿನಾಂಕ: 01–09–2022 ರಿಂದ 31–03–2023 ರವರೆಗೆ ಇರುತ್ತದೆ. ಅಗತ್ಯವಿದ್ದರೆ ಇವೇ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅಥವಾ ಇನ್ನೂ ಹೆಚ್ಚಿನ ಷರತ್ತುಗಳ ಜೊತೆಗೆ ಮತ್ತೊಂದು ವರ್ಷದ ಒಂದು ತ್ರೈಮಾಸಿಕದ ಅವಧಿಗೆ ವಾಹನ ಮಾಲೀಕರು ಮತ್ತು ಈ ಇಲಾಖೆಯ ಆಯುಕ್ತರ ಲಿಖಿತ ಇಚ್ಛೆಯ ಮೇರೆಗೆ ಮುಂದುವರಿಸಬಹುದಾಗಿದೆ. ಇದಕ್ಕೂ ಮೊದಲು ಸಹ ಕರಾರು ರದ್ದುಗೊಳಿಸುವ ಹಕ್ಕು ಆಯುಕ್ತರು/ಅಪರ ಆಯುಕ್ತರವರದ್ದಾಗಿರುತ್ತದೆ. ಅಲ್ಲದೆ ಅವಧಿಗೆ ಮುನ್ನಾ ಮೇಲ್ಕಂಡ ಕರಾರನ್ನು ರದ್ದುಗೊಳಿಸುವ ಹಕ್ಕು ವಾಣಿಜ್ಯ ತೆರಿಗೆ ಆಯುಕ್ತರಿಗೆ / ಅಪರ ಆಯುಕ್ತರಿಗೆ ಇರುತ್ತದೆ. |
| 8 | ವಾಹನವನ್ನು ಸರಕಾರಿ ಕೆಲಸಕ್ಕೆ ಉಪಯೋಗಿಸುವಾಗ "ಸರಕಾರಿ ಕೆಲಸದ ಮೇಲೆ" ಅಥವಾ "ಕರ್ನಾಟಕ ಸರ್ಕಾರದ ಸೇವೆಯಲ್ಲಿ" ಎಂಬ ಫಲಕವಿರಬೇಕು. ಪಾರ್ಕಿಂಗ್ ಶುಲ್ಕ ಇತ್ಯಾದಿ ವಾಹನ ಮಾಲೀಕರೇ ಭರಿಸತಕ್ಕದ್ದು. |
| 9 | ವಾಹನದ ಯಾವುದೇ ಕಾನೂನು ಉಲ್ಲಂಘನೆಗೆ ಸ್ವತಃ ಮಾಲೀಕ/ಚಾಲಕರೇ/ಟ್ರಾವಲ್ ಏಜನ್ಸೀಸ್/ಸಂಸ್ಥೆಯವರೇ ಜವಾಬ್ದಾರರಾಗಿರುತ್ತಾರೆ. |
| 10 | ವಾಹನವನ್ನು ಕಛೇರಿಯ ಕೆಲಸಕ್ಕೆ ಉಪಯೋಗಿಸಿದ ನಂತರ ಸಂಬಂಧಪಟ್ಟ ಅಧಿಕಾರಿಗಳಿಂದ ಕಾಲಕಾಲಕ್ಕೆ ಸರಿಯಾಗಿ ಉಪಯೋಗಿಸಿದ ವಿವರದೊಂದಿಗೆ ಟ್ರಿಪ್ ಶೀಟ್‌ನಲ್ಲಿ ಭರ್ತಿ ಮಾಡಿ ಸಹಿ ಮಾಡುವುದು. |
| 11 | ಈ ಇಲಾಖೆಗೆ ಹೊರ ಗುತ್ತಿಗೆ ಆಧಾರದ ಮೇಲೆ ವಾಹನವನ್ನು ಪಡೆದಿರುವಂತಹ ಅವಧಿಯಲ್ಲಿ ಬೇರೆ ಯಾವುದೇ ಇಲಾಖೆಯಲ್ಲಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಅಥವಾ ಬೇರೆ ಇನ್ನಾವುದೇ ಕೆಲಸಗಳಿಗೆ ವಾಹನವನ್ನು ಉಪಯೋಗಿಸುವಂತಿಲ್ಲ ಹಾಗೂ ವಾಹನವನ್ನು ಪೂರ್ಣವಾಗಿ "ವಾಣಿಜ್ಯ ತೆರಿಗೆ ಇಲಾಖಾ ಸೇವೆಗಾಗಿ" |

| | |
|---|---|
| | ಮೀಸಲಿಡತಕ್ಕದ್ದು. |
| 12 | ಈ ಭಾಗದ ಅಧಿಕಾರಿಗಳು ರಜೆ/ಅನ್ಯ ಸೇವೆ/ಇನ್ಯಾವುದೇ ಕಛೇರಿ ಕಾರ್ಯ ನಿಮಿತ್ತ ಕಛೇರಿಯಿಂದ ಹೊರಗೆ ತೆರಳಿದ ಸಂದರ್ಭದಲ್ಲಿ ಅವರಿಗೆ ಸಂಬಂಧಿಸಿದ ವಾಹನ ಚಾಲಕರು ಆ ದಿನ ಪೂರ್ವಾಹ್ನ 10-00 ಗಂಟೆಗೆ ಕಡ್ಡಾಯವಾಗಿ ಪತ್ರಾಂಕಿತ ವ್ಯವಸ್ಥಾಪಕರ ಬಳಿ ವರದಿ ಮಾಡಿಕೊಂಡು ಕಛೇರಿ ಆವರಣದಲ್ಲಿಯೇ ವಾಹನದೊಂದಿಗೆ ಇರತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ಗೈರು ಹಾಜರು ಎಂದು ಪರಿಗಣಿಸಿ ಆ ದಿನದ ಸಂಭಾವನೆಯನ್ನು ಕಡಿತಗೊಳಿಸಲಾಗುವುದು. |
| 13 | ಖಾಸಗಿ ವಾಹನ ಮಾಲೀಕರು/ಚಾಲಕರು/ಟ್ರಾವಲ್ ಏಜನ್ಸೀಸ್/ಸಂಸ್ಥೆಯವರ ಮಾಸಿಕ ಬಾಡಿಗೆಗೆ ಸಂಬಂಧಿಸಿದಂತೆ ಈ ಕಛೇರಿಗೆ ಬಿಲ್ಲುಗಳನ್ನು ಸಲ್ಲಿಸುವಾಗ ಮಾಹೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಗಳು, ಒಟ್ಟು ಓಡಿಸಿದ ಕಿಲೋಮೀಟರ್ ಮತ್ತು ಸಮಯಕ್ಕೆ ಸಂಬಂಧಿಸಿದಂತೆ ದೃಡೀಕೃತ ಪ್ರಮಾಣ ಪತ್ರವನ್ನು ಅಧಿಕಾರಿಗಳಿಂದ ಪಡೆದು ಬಿಲ್ಲಿನ ಜೊತೆ ಸಲ್ಲಿಸುವುದು. |
| 14 | ಮೇಲಿನ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸದಿರುವುದು ಮತ್ತು ನಿರ್ಲಕ್ಷಿಸಿರುವುದು ಕಂಡುಬಂದಲ್ಲಿ ಯಾವುದೇ ಸೂಚನೆ ನೀಡದೆ ಹೊರಗುತ್ತಿಗೆ ಆಧಾರದ ಕರಾರನ್ನು ರದ್ದುಪಡಿಸಲಾಗುವುದು. |
| 15 | ಏಜನ್ಸಿ/ಸಂಸ್ಥೆಯು ಚಾಲಕರಿಗೆ ಪ್ರತಿ ತಿಂಗಳು ನೀಡಬೇಕಾದ ಕನಿಷ್ಠ ವೇತನ ಮತ್ತು ಇತರೆ ಹಣಕಾಸಿನ ಹೊಣೆಗಾರಿಕೆಗೆ ಬದ್ಧವಾಗಿರತಕ್ಕದ್ದು ಮತ್ತು ಚಾಲಕರಿಗೆ ನೀಡಬೇಕಾದ ಇ.ಎಸ್.ಐ ಹಾಗೂ ಇ.ಪಿ.ಎಫ್‌ಗಳನ್ನು ಸಂಸ್ಥೆಯಿಂದ ಪಾವತಿಸಿದ ಬಗ್ಗೆ ಚಲನ್‌ಗಳನ್ನು ಪ್ರತಿ ತಿಂಗಳ ಮೊದಲ ವಾರದಲ್ಲಿ ಕಛೇರಿಗೆ ಸಲ್ಲಿಸತಕ್ಕದ್ದು. |
| 16 | ವಾಹನ ಚಾಲಕರು ಒಂದು ವೇಳೆ ಕರಾರು ಒಪ್ಪಂದವನ್ನು ರದ್ದುಪಡಿಸಬೇಕಾದರೆ, ಒಂದು ತಿಂಗಳು ಮುಂಚಿತವಾಗಿ ಈ ಕಛೇರಿಗೆ ಲಿಖಿತ ಮೂಲಕ ತಿಳಿಸಬೇಕು. ತಪ್ಪಿದ್ದಲ್ಲಿ ಒಂದು ತಿಂಗಳ ವಾಹನದ ಬಾಡಿಗೆ ಮೊತ್ತವನ್ನು ನೀಡುವುದಿಲ್ಲ ಹಾಗೂ ಇದಕ್ಕೂ ಮೊದಲು ಸಹ ಕರಾರು ರದ್ದುಗೊಳಿಸುವ ಹಕ್ಕು ಆಯುಕ್ತರು/ಅಪರ ಆಯುಕ್ತರವರದ್ದಾಗಿರುತ್ತದೆ. |
| 17 | ಯಾವುದೇ ಸುಚನೆ ನೀಡದೆ ಟೆಂಡರ್ ಅನ್ನು ತಿರಸ್ಕರಿಸುವ ಮತ್ತು ಪಡೆಯುವ ಹಕ್ಕು ವಾಣಿಜ್ಯ ತೆರಿಗೆ ಆಯುಕ್ತರಿಗೆ / ಅಪರ ಆಯುಕ್ತರಿಗೆ ಇರುತ್ತದೆ. |

- ಪ್ರತಿ ವಾಹನದ ಗುಣಮಟ್ಟವನ್ನು ಹಾಗೂ ಚಾಲನ ಕೌಶಲ್ಯವನ್ನು ಪರಿಶೀಲಿಸಿ ನಂತರವೇ ವಾಹನವನ್ನು ತೆಗೆದುಕೊಳ್ಳಲಾಗುವುದು.

(ಕೆ ರಾಮನ್)

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು, (ಆಡಳಿತ),

ವಿ.ಸ&ಸೇ.ತೆ.ಕ.-2, ಬೆಂಗಳೂರು.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು

(ಆಡಳಿತ) ವಿ.ಸ.& ಸೇ.ತೆ.ಕ-2, ಬೆಂಗಳೂರು

ಪ್ರತಿಯನ್ನು:-

01. ಕಛೇರಿ ಸೂಚನಾ ಫಲಕಕ್ಕೆ.
02. ಮಾನ್ಯ ವಾಣಿಜ್ಯ ತೆರಿಗೆಗಳ ಅಪರ ಅಯುಕ್ತರು (ಕೇಂದ್ರ ಕಛೇರಿ)-2 ಬೆಂಗಳೂರು ಇವರಿಗೆ ಮಾಹಿತಿಗಾಗಿ.
03. ಮಾನ್ಯ ವಾಣಿಜ್ಯ ತೆರಿಗೆಗಳ ಅಪರ ಅಯುಕ್ತರು (ಇ-ಆಡಳಿತ), ಬೆಂಗಳೂರು ಇವರಿಗೆ ಮ?ಆಹಿತಿಗಾಗಿ ಹಾಗೂ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಿದೆ.
04. ಅಪ್ತ ಶಾಖೆಗೆ.
05. ಕಛೇರಿ ಪ್ರತಿ.